| Deposition Sheets (RP.No.57) Form No.4 |
|---|

**IN THE COURT OF II ADDL. CIVIL JUDGE & J.M.F.C., KARKALA.**

**Criminal Case No.400/2017**

ಪಿ.ಡಬ್ಲ್ಯು ಃ 4 ಸಿ.ಡಬ್ಲ್ಯು ಃ 5

| | | |
|---|---|---|
| ಸಾಕ್ಷಿದಾರನ ಹೆಸರು | ಃ | ರಾಯನ್ |
| ತಂದೆಯ ಹೆಸರು | ಃ | ರೋಬಾರ್ಟ್ |
| ಪ್ರಾಯ | ಃ | 33 ವರ್ಷ |
| ಉದ್ಯೋಗ | ಃ | ರಿಕ್ಷಾ ಚಾಲಕ |
| ವಾಸ | ಃ | ಮಿಯಾರು |

ದಿನಾಂಕ 08.11.2019 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-**

ಈಗ ನನಗೆ ತೋರಿಸಿದ ದಾಖಲೆಯಲ್ಲಿರುವ ಸಹಿ ನನ್ನದು. ಸದ್ರಿ ದಾಖಲೆಗೆ ಸುಮಾರು 3 ವರ್ಷಗಳ ಹಿಂದೆ ಡಿಸೆಂಬರ್ 11 ರಂದು ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಸದ್ರಿ ದಾಖಲೆಯು ಈ ದಿನ ನ್ಯಾಯಾಲಯದ ಮುಂದೆ ಇರುವ ಆರೋಪಿಯಿಂದ ಕಳ್ಳತನವಾದ ರೂ.14,950/- ಮತ್ತು ಜನೆಕ್ಸ್ ಗೋಲ್ಡ್ ನ್ನು ಸ್ವಾಧೀನಪಡಿಸಿಕೊಂಡ ಸಲುವಾಗಿ ಜರುಗಿಸಿದ ಮಹಜರು. ಸದ್ರಿ ದಸ್ತಗಿರಿ ಮಹಜರ್ ನ ಪ್ರತಿಯನ್ನು ನಿಪಿ-6 ಎಂದು, ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು. ಸದ್ರಿ ಮಹಜರನ್ನು ಬೆಳಿಗ್ಗೆ 9.45 ಗಂಟೆಯಿಂದ 10.30 ಗಂಟೆ ಸಮಯದಲ್ಲಿ ಜರುಗಿಸಲಾಗಿತ್ತು. ಸದ್ರಿ ನಗದನ್ನು ಆರೋಪಿಯ ಕಿಸೆಯಿಂದ ಸ್ವಾಧೀನಪಡಿಸಿಕೊಳ್ಳಲಾಗಿತ್ತು. ಸದ್ರಿ ನಗದನ್ನು ಆರೋಪಿಯು ಮಿಯಾರಿನ ನೆಲ್ಲಿಗುಡ್ಡೆ ಎಂಬಲ್ಲಿ ಕಳ್ಳತನ ಮಾಡಿದ್ದರು. ಸದ್ರಿ ನಗದು 2,000 ಮುಖ ಬೆಲೆ 6 ನೋಟು, 100 ಮುಖ ಬೆಲೆಯ 23 ನೋಟು ಮತ್ತು 50 ಮುಖ ಬೆಲೆಯ 13 ನೋಟುಗಳನ್ನು ಹೊಂದಿತ್ತು. ಸದ್ರಿ ನಗದು ಮತ್ತು ವಾಚನ್ನು ನೋಡಿದರೆ ಗುರುತಿಸುತ್ತೇನೆ. ಈಗ ನನಗೆ ತೋರಿಸಿದ ಛಾಯ ಚಿತ್ರದ ಪ್ರತಿಯಲ್ಲಿ ಕಾಣುತ್ತಿರುವ ನಗದು ಮತ್ತು ವಾಚು ಆಗಿರುತ್ತದೆ (ಸದ್ರಿ ಛಾಯ ಚಿತ್ರದ ಮೂಲ ಪ್ರತಿಯನ್ನು ಅಪರಾಧಿಕ ಪ್ರಕರಣ ಸಂಖ್ಯೆ 223/2017 ರಲ್ಲಿ ನಿಪಿ-5 ಎಂದು ಗುರುತಿಸಲಾಗಿರುತ್ತದೆ). ಸದ್ರಿ ಛಾಯ ಚಿತ್ರದ ಪ್ರತಿಯನ್ನು ಆರೋಪಿ ಪರ ವಕೀಲರ ತಕರಾರಿನ ಮೇರೆಗೆ ನಿಪಿ-7 ಎಂದು ಗುರುತಿಸಲಾಯಿತು.

**ಪಾಟೀ ಸವಾಲು :** ಆರೋಪಿ ಪರ : ಶ್ರೀ ಕೆ ಬಿ ಎಸ್ ವಕೀಲರಿಂದ :

ನಾನು ಮಿಯಾರಿನಲ್ಲಿ ಅಟೋ ರಿಕ್ಷಾ ಚಾಲಾಯಿಸಿಕೊಂಡಿರುತ್ತೇನೆ. ದಿ: 11.12.2016 ರಂದು ಶಿವಣ್ಣ ಹೆಗ್ಡೆಯವರೊಂದಿಗೆ ಕಾರ್ಕಳ ಗ್ರಾಮಾಂತರ ಪೊಲೀಸ್ ಠಾಣೆಗೆ ಭೇಟಿ ನೀಡಿರುತ್ತೇನೆ. ಸದ್ರಿ ಪೊಲೀಸ್ ಠಾಗೆ ಹೋಗಬೇಕೆಂದು ಶಿವಣ್ಣ ಹೆಗ್ಡೆಯವರು ತಿಳಿಸಿರುತ್ತಾರೆ. ಹಾಗೇ ಪೊಲೀಸ್ ಠಾಣೆಗೆ ಹೋದಾಗ ಇತರ ಪೊಲೀಸರು ಮತ್ತು ವ್ಯಕ್ತಿಗಳು ಹಾಜರಿದ್ದರು. ಪೊಲೀಸರು ನಾನು ಹೋಗುವ ಪೂರ್ವದಲ್ಲಿ ದಸ್ತಗಿರಿ ಮಹಜರನ್ನು ಜರುಗಿಸಿದ್ದರೋ ಅಥವಾ ಇಲ್ಲವೊ ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಕಳ್ಳತನವಾದ ಕುರಿತು ಮಹಜರು ಜರುಗಿಸುವ ಸಲುವಾಗಿ ಸಾಕ್ಷಿದಾರನಾಗಿ ಸಹಿ ಮಾಡುವಂತೆ ಪೊಲೀಸರು ಸೂಚಿಸಿರುತ್ತಾರೆ. ನಾನು ಪೊಲೀಸ್ ಠಾಣೆಗೆ ಹೋದಾಗ ಪೊಲೀಸರು ಅರೋಪಿಯನ್ನು ತೋರಿಸಿ ಈತನೇ ಕಳುವು ಮಾಡಿದ ವ್ಯಕ್ತಿಎಂದು ತೋರಿಸಿರುತ್ತಾರೆ. ನಿಪಿ-7 ರಲ್ಲಿನ ಸೊತ್ತುಗಳನ್ನು ಠಾಣೆಯ ಉಪನೀರಿಕ್ಷಕರ ಮೇಜಿನ ಮೇಲೆ ಇಟ್ಟಿದ್ದು ಅದನ್ನು ಪೊಲೀಸರು ನನಗೆ ತೋರಿಸಿರುತ್ತಾರೆ. ಆ ಕುರಿತು ಪೊಲೀಸರು ನನಗೆ ಸಹಿ ಮಾಡುವಂತೆ ತಿಳಿಸಿರುತ್ತಾರೆ. ಹಾಗೆ ಹೋದಾಗ ಪೊಲೀಸರು ಶಿವಣ್ಣ ಹೆಗ್ಡೆಯವರನ್ನು ವಿಚಾರಿಸಿ ಸಹಿ ಪಡೆದುಕೊಂಡಿರುವುದಿಲ್ಲ. ಚಾಸಾ-1 ರವರನ್ನು ನನ್ನ ಸಮಕ್ಷಮ ಸದ್ರಿ ವಸ್ತುಗಳನ್ನು ಗುರುತಿಸಿರುವುದಿಲ್ಲ. ನನ್ನ ಸಮಕ್ಷಮ ರಮೇಶ್ ಹೆಗ್ಡೆ ಎಂಬುವವರು ಸಹಿ ಮಾಡಿದ್ದರು. ಸದ್ರಿ ರಮೇಶ್ ಹೆಗ್ಡೆ ಹೊರತುಪಡಿಸಿ ಬೇರೆ ಯಾರೆಲ್ಲ ಸಹಿ ಮಾಡಿದ್ದರು ಎಂದು ನನಗೆ ಗೊತ್ತಿಲ್ಲ. ನಾನು ಒಂದು ದಾಖಲೆಗೆ ಮಾತ್ರ ಸಹಿ ಮಾಡಿರುತ್ತೇನೆ. ನನಗೆ ಪೊಲೀಸರ ಪರಿಚಯವಿದೆ ಮತ್ತು ಅವರ ಕೋರಿಕೆಯಂತೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದಂತೆ ನನ್ನ ಸಮಕ್ಷಮ ಯಾವುದೇ ನಗದು ಮತ್ತು ವಾಚನ್ನು ಸ್ವಾಧೀನಪಡಿಸಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸದ್ರಿ ಸೊತ್ತುಗಳಿಗೆ ಮತ್ತು ಆರೋಪಿಗೆ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಎರಡನೆ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾ.ದಂ. ಕಾರ್ಕಳ